# ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಬರ 230/2021

ಸಿಡಬ್ಲ್ಯೂ- 1/ ಪಿಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀಮತಿ. ಖಾತುಂಬಿ |
| ಗಂಡನ ಹೆಸರು | ಃ | ನಾನಸಾಬ ಸಿದ್ದಿ |
| ವಯಸ್ಸು | ಃ | 60 ವರ್ಷ |
| ವೃತ್ತಿ | ಃ | ಕೂಲಿ ಕೆಲಸ |
| ವಾಸ್ತವ್ಯ | ಃ | ಮೈನಳ್ಳಿ, ಮುಂಡಗೋಡ |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 29-12-2023.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ದಿಃ 18-10-2020 ರಂದು ರಾತ್ರಿ ನಾವು ಊಟ ಮಾಡಿ ಮನೆಯಲ್ಲಿ ಮಲಗಿದ್ದಾಗ ನನ್ನ ಮೊಮ್ಮಗಳಾದ ಚಾಸಾ10 ರವರು ಮಧ್ಯರಾತ್ರಿಯಲ್ಲಿ ಎದ್ದು ಕಿರುಚಿದಾಗ ನಾನು ಬ್ಯಾಟರಿಯಿಂದ ಅವಳನ್ನು ಏಕೆ ಅಳುತ್ತಿದ್ದೀ ಎಂದು ಕೇಳಿ ಮನೆಯ ಹಿಂದಿನ ಬಾಗಿಲ ಕಡೆಗೆ ಬ್ಯಾಟರಿಯನ್ನು ಬಿಟ್ಟು ನೋಡಿದಾಗ ಹಿಂದಿನ ಬಾಗಿಲವು ತೆರೆದಿದ್ದು ಮುಂದೆ ಹೋಗಿ ನೋಡಿದಾಗ ಹೊರಗಡೆ ಒಬ್ಬ ವ್ಯಕ್ತಿ ಕಪ್ಪು ಬಣ್ಣದ ಪ್ಯಾಂಟು ಮತ್ತು ಶರ್ಟನ್ನು ಧರಿಸಿಕೊಂಡು ನಿಂತಿದ್ದು ಕಾಣಿಸಿರುತ್ತದೆ . ಆಗ ನನ್ನ ಮಗನಾದ ಚಾಸಾ 9 ರವರನ್ನು ಎಬ್ಬಿಸಿದಾಗ ಆತನು ಹಿಂದಿನ ಬಾಗಿಲನ್ನು ತೆಗೆದು ನಿಂತಿದ್ದ ವ್ಯಕ್ತಿಯನ್ನು ಹಿಡಿಯಲು ಹೋದಾಗ ಆತನು ಓಡಿ ಹೋಗಿದ್ದು ಬೆನ್ನಟ್ಟಿದರೂ ಸಿಕ್ಕಿರುವುದಿಲ್ಲ. ನಂತರ ನಾವು ಬಾಗಿಲ ಹಾಕಿ ಮಲಗಿದ್ದು, ನನ್ನ ಸೊಸೆ ಚಾಸಾ 8 ರವರು ಬೆಳಗ್ಗೆ 6 ಗಂಟೆಗೆ ಎದ್ದು ನೋಡಿದಾಗ ನಮ್ಮ ಮನೆಯಲ್ಲಿ ಇಟ್ಟಿದ್ದ ಟ್ರಜರಿಯು ತೆಗೆದಿದ್ದು ಅದರಲ್ಲಿದ್ದ ನಮ್ಮ ಮೊಮ್ಮಕ್ಕಳ ಬಂಗಾರದ ಎರಡು ತಾಯತಗಳು ಇದ್ದಿರಲಿಲ್ಲ. ನಂತರ ರಾತ್ರಿ ನಡೆದ ಘಟನೆಯನ್ನು ಅಕ್ಕಪಕ್ಕದವರಿಗೆ ಹೇಳಿ ನಮ್ಮ ಮನೆಯಲ್ಲಿದ್ದ ಬಂಗಾರದ ತಾಯತಗಳು ಕಳುವುದಾಗಿರುವ ಕುರಿತು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ದಿಃ 19-10-2020 ರಂದು ಕಾರವಾರದಿಂದ ಶ್ವಾನದಳದವರು ನಮ್ಮ ಮನೆಗೆ ಬಂದು ತಪಾಸಣೆ ಮಾಡಿರುತ್ತಾರೆ. ಮತ್ತು ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ಸ್ಥಳದ ಕಚ್ಚಾನಕಾಶೆಯನ್ನು ಮಧ್ಯಾಹ್ನ 3-30 ಗಂಟೆಯಿಂದ 4-30 ವರೆಗೆ ಜರುಗಿಸಿರುತ್ತಾರೆ. ನಂತರ ಸ್ಥಳದ ಫೋಟೋಗಳನ್ನು ತೆಗೆದಿರುತ್ತಾರೆ. ನಂತರ ಆ ದಿನ ಕಳ್ಳತನ ಮಾಡಲು ಬಂದಿದ್ದ ವ್ಯಕ್ತಿ ಮನೆಯಲ್ಲಿನ ವಿದ್ಯುತ್ ಬಲ್ಬನ್ನು ತೆಗೆದಿರುವುದರ ಬಗ್ಗೆ ತಿಳಿದು ಆ ಕುರಿತು ಮರು ಹೇಳಿಕೆಯನ್ನು ಕೊಟ್ಟಿರುತ್ತೇನೆ. ದಿಃ 10-12-2020 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಆ ದಿನ ನಿಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿಯನ್ನು ತೋರಿಸಿದ್ದು, ಆತನ ಹೆಸರು ಕೃಷ್ಣಪ್ಪ ಲಮಾಣಿ ಎಂದು ಹೇಳಿರುತ್ತಾರೆ. ಆ ದಿನ ಪೊಲೀಸ್ ಠಾಣೆಯಲ್ಲಿ ಪೊಲೀಸರು ತೋರಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದ ವ್ಯಕ್ತಿಯೇ ಆಗಿರುತ್ತಾನೆ. ನಂತರ ಪೊಲೀಸರು ಸದರಿ ಕೃಷ್ಣಪ್ಪ ಲಮಾಣಿಯನ್ನು ನಮ್ಮ ಮನೆಗೆ ಕರೆದುಕೊಂಡು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಲು ಬಂದಿರುತ್ತಾರೆ . ಆರೋಪಿತನನ್ನು ಮನೆಯಲ್ಲಿ ಕರೆದು ತೋರಿಸಿ ಆತನ, ನನ್ನ ಹಾಗೂ ಚಾಸಾ 2 ಮತ್ತು 3 ರವರೊಂದಿಗೆ ಫೋಟೋವನ್ನು ಪೊಲೀಸರು ತೆಗೆದಿರುತ್ತಾರೆ. ನಂತರ ಪೊಲೀಸ್ ಠಾಣೆಗೆ ಹೋಗಿ ಒಂದು ಬಾಕ್ಸಿನಲ್ಲಿಟ್ಟಿದ್ದ ಬಂಗಾರದ ಒಡವೆಗಳನ್ನು ತೋರಿಸಿ ಅವುಗಳಲ್ಲಿ ನಿಮ್ಮ ಮನೆಯಿಂದ ಕಳುವಾದ ಆಭರಣಗಳು ಯಾವುವು ಎಂದು ಗುರುತಿಸಲು ಹೇಳಿದ್ದರಿಂದ ನಾನು ನನ್ನ ಮೊಮ್ಮಕ್ಕಳ ಬಂಗಾರದ ತಾಯತಗಳನ್ನು ಗುರುತಿಸಿ ಇವು ನಮ್ಮ ಆಭರಣಗಳು ಎಂದು ಹೇಳಿದ್ದು, ಠಾಣೆಯಲ್ಲಿ ಪೊಲೀಸರು

ಸದರಿ ಆಭರಣಗಳೊಂದಿಗೆ ನನ್ನ ಫೋಟೋವನ್ನು ತೆಗೆದಿರುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1 ಎಂದು, ಸಾಕ್ಷಿಯು ಗುನ್ನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು, ಸಾಕ್ಷಿಯು ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 3 ಮತ್ತು 4 ಎಂದು, ಸಾಕ್ಷಿಯು ಕಚ್ಚಾ ನಕ್ಷೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು, ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಎಂದು, ಸಾಕ್ಷಿಯು ಮನೆಯಲ್ಲಿ ಆರೋಪಿತನು ಕಳ್ಳತನ ಮಾಡಿದ ಸ್ಥಳವನ್ನು ತೋರಿಸುವಾಗ ತೆಗೆದಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ7 ಮತ್ತು 8 ಎಂದು, ಸಾಕ್ಷಿಯು ಠಾಣೆಯಲ್ಲಿ ಆಭರಣವನ್ನು ಗುರುತಿಸುವ ಸಮಯದಲ್ಲಿ ತೆಗೆದ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು, ಸಿಡಿಯನ್ನು ನಿಪಿ10 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳಾದ ಎರಡು ಬಂಗಾರದ ತಾಯತಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಎಂ.ಓ. 1 ಮತ್ತು 2 ಎಂದು ಗುರುತಿಸಲಾಯಿತು.

**(ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.**

ಪೊಲೀಸರು ಕಳುವು ಮಾಡಿದ ಆರೋಪಿತನನ್ನು ತೋರಿಸಲು ಠಾಣೆಗೆ ಕರೆದ ದಿಃ 03-11-2020 ಎಂದರೆ ನಿಜ. ಆರೋಪಿತನನ್ನು ಕಳುವು ಮಾಡಿದ ಸ್ಥಳವನ್ನು ತೋರಿಸಲು ಕರೆತಂದ ದಿಃ 10-12-2020 ಎಂದರೆ ನಿಜ. ಠಾಣೆಯಲ್ಲಿ ಕಳ್ಳತನದ ಕುರಿತು ಎರಡು ಮರು ಹೇಳಿಕೆಗಳನ್ನು ಕೊಟ್ಟಿರುತ್ತೇನೆ ಎಂದರೆ ನಿಜ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ. ಎಂ.ಎಸ್.ಜಿ. ವಕೀಲರು ಗೈರುಹಾಜರಿದ್ದು, ಪಾಟೀ ಸವಾಲನ್ನು ಇಲ್ಲ ಎಂದು ಪರಿಗಣಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ

-sd -

**ಪ್ರ.ದ.ನ್ಯಾ.ದಂ. ಮುಂಡಗೋಡ.**